ಕವಿತೆ



ಮೂಲ: **ರವೀಂದ್ರನಾಥ ಟ್ಯಾಗೋರ್**
ಕನ್ನಡಕ್ಕೆ: **ಮೋಹನಚಂದ ಪಾಟೀಲ**
ಕಲೆ: ವಾಗೀಶ ಹೆಗಡೆ





# ನಂದೂ ನಿಂದೂ ಒಂದೇ ಊರು

ನಂದೂ ನಿಂದೂ ಒಂದೇ ಊರು ನಮ್ಮ ಸಂತಸಕೆ ಉಸಿರು
ಅವಳ ಗಿಡದಲಿ ಹಕ್ಕಿ ಹಾಡಲು ನನ್ನೆದೆಯಲಿ ಹರ್ಷದ ಹೊನಲು
ಅವಳ ಮುದ್ದು ಕುರಿಗಳ ಜೋಡಿ ನನ್ನ ತೋಟದ ನೆರಳಲಿ
ಮೇಯುತ ನನ್ನ ಹೊಲ ಹೊಕ್ಕರೆ ಬರುವವು ನನ್ನ ತೋಳಲಿ
ನಮ್ಮೂರ ಹೆಸರು ಖಂಜುನಾ ನದಿಯ ಹೆಸರು ಅಂಜನಾ
ನನ್ನ ಹೆಸರು ಗೊತ್ತು ಊರಿಗೆ ಅವಳ ಹೆಸರು ರಂಜನಾ

ನಮ್ಮ ನಡುವೆ ಹರಡಿದೆ ಒಂದೇ ಹೊಲ ಹಸಿರು
ನಮ್ಮ ತೋಟದ ಜೇನು ಹಾರುವವು ಅವಳ ಹೂಗಳಿಗೆ
ಅವಳ ಗದ್ದೆಯ ಹೂಗಳು ತೇಲಿಬರುವವು ನಮ್ಮೆಡೆ ಝುರಿಯಲಿ
ಅವರ ಹೂಗಳ ಬುಟ್ಟಿಗಳು ಬರುವವು ನಮ್ಮ ಸಂತೆಯಲಿ
ನಮ್ಮೂರ ಹೆಸರು ಖಂಜುನಾ ನದಿಯ ಹೆಸರು ಅಂಜನಾ
ನನ್ನ ಹೆಸರು ಗೊತ್ತು ಊರಿಗೆ ಅವಳ ಹೆಸರು ರಂಜನಾ

ಅವಳ ಮನೆಯ ದಾರಿ ತಿರುವಿನಲಿ ಮಾವಿನ ಚಿಗುರಿನ ಪರಿಮಳ
ಅವರ ಮಾಗಿದ ಪೈರಿನ ಸುಗ್ಗಿಗೆ ನಮ್ಮಲರಳುವವು ನಾರಿನ ಹೂಗಳು
ಅವರ ಮನೆ ಮೇಲೆ ನಗುವ ತಾರೆಗಳು ಮಿನುಗುವವು ನಮ್ಮಂಗಳದಿ
ಅವಳ ಕೆರೆ ತುಂಬಿ ಹರಿದ ನೀರು ತಣಿಸುವುದು ನಮ್ಮ ಅರಣ್ಯದಿ
ನಮ್ಮೂರ ಹೆಸರು ಖಂಜುನಾ ನದಿಯ ಹೆಸರು ಅಂಜನಾ
ನನ್ನ ಹೆಸರು ಗೊತ್ತು ಊರಿಗೆ ಅವಳ ಹೆಸರು ರಂಜನಾ